## ಗ್ರಾಮೀಣ ಗ್ರಂಥಾಲಯಗಳು ಹಾಗೂ ಶಾಳೆಗಳಲ್ಲಿ ಬಹು ಉಪಯೋಗಿ ಕಲಿಕಾ ಕೇಂದ್ರಗಳು:

ಕರ್ನಾಟಕ ಗ್ರಾಮೀಣ ಗ್ರಂಥಾಲಯಗಳಲ್ಲಿ ಸಮಾನ ಅಂತರ್ಗತ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಗ್ರಾಮೀಣ ಗ್ರಂಥಾಲಯಗಳು/ ಶಾಲೆಗಳಲ್ಲಿ ಬಹು ಉಪಯೋಗಿ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

## ಹಿನ್ನಲೆ:

ರಾಷ್ಟ್ರೀಯ ಶಿಕ್ಷಣ ನೀತಿ 2020, ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಂತರ್ಗತ ಮತ್ತು ರಚನಾತ್ಮಕ ಬದಲಾವಣೆಯನ್ನು ಕಲ್ಪಿಸುತ್ತದೆ. ಇದು "ಸಮಾನ ಮತ್ತು ಅಂತರ್ಗತ ಶಿಕ್ಷಣ"ದ ಮೇಲೆ ಕೇಂದ್ರೀಕರಿಸುತ್ತದೆ. ಈ ನೀತಿಯು ಮಕ್ಕಳ ಹಿನ್ನಲೆ ಮತ್ತು ಸಾಮಾಜಿಕ/ ಸಾಂಸ್ಕೃತಿಕ ಗುರುತುಸುವಿಕೆಯ ಆಧಾರದ ಮೇಲೆ ಶೈಕ್ಷಣಿಕ ಅವಕಾಶಗಳನ್ನು ಪಡೆಯುವುದರಲ್ಲಿ ಹಿಂದುಳಿಯಬಾರದೆಂಬ ಕಲ್ಪನೆ ಪ್ರತಿ ಧ್ವನಿಸುತ್ತದೆ. NEP 2020, SEDG (Socio-Economically Disadvantage Groups) ಮಕ್ಕಳನ್ನು ಸಾಮಾಜಿಕ ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು ಗುರುತಿಸಲು ರಾಜ್ಯ ಸರ್ಕಾರಗಳಿಗೆ ಸೂಚಿಸುತ್ತದೆ. SEDG ಗಳು ವಿಕಲಾಂಗ ಮಕ್ಕಳು, ಲಿಂಗಭೇದ (ವಿಶೇಷವಾಗಿ ಸ್ತ್ರೀಲಿಂಗ ಹಾಗೂ ಮಂಗಳಮುಖಿ ಮಕ್ಕಳು), ಸಾಮಾಜಿಕ – ಆರ್ಥಿಕವಾಗಿ ಹಿಂದುಳಿದ ಗುಂಪುಗಳನ್ನು ಗುರುತಿಸಲು (ಉದಾ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ OBC ಗಳು ಮತ್ತು ಅಲ್ಪ ಸಂಖ್ಯಾತರು) ಅವಕಾಶ ಕಲ್ಪಿಸಿದೆ. ಭೌಗೋಳಿಕವಾಗಿ ಗುರುತುಸುವುದನ್ನು ಸಣ್ಣ ಪಟ್ಟಣಗಳು ಒಲಸೆ ಕುಟುಂಬಗಳ ಮಕ್ಕಳು, ಸಂಘರ್ಷದ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳು ಇತ್ಯಾದಿ ಒಳಗೊಂಡಂತೆ ವರ್ಗೀಕರಿಸಬಹುದು.

ಅಂತರ್ಗತ ಶಿಕ್ಷಣವು ಅಲ್ಪಾವಧಿಯ ಅಥವಾ ದೀರ್ಘಾವಧಿಯ ವಿಶೇಷ ಶೈಕ್ಷಣಿಕ ಅಗತ್ಯತೆಗಳನ್ನು ಹೊಂದಿರುವ ವಿಕಲಾಂಗ ಮಕ್ಕಳಿಗೆ ನಿರಂತರ ಸಹಾಯ ಅಗತ್ಯ ವಿರುವ ಒಂದು ತಂತ್ರಗಾರಿಕೆಯಾಗಿರುತ್ತದೆ. ಅಂಗವೈಕಲ್ಯವು ರಾಜ್ಯದ ವಿಷಯವಾಗಿದ್ದು, ಪಂಚಾಯತ್ ರಾಜ್ ಸಂಸ್ಥೆಗಳ ವಿಷಯವಾಗಿರುವುದರಿಂದ ಪಂಚಾಯತ್‌ಗಳ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುವ ಅವಶ್ಯಕತೆ ಇದೆ. ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಕಾಯ್ದೆ 2016 ಅಡಿ 21 ವಿಧದ ಅಂಗವೈಕಲ್ಯವನ್ನು ಗುರುತಿಸಲಾಗಿದೆ.

## ಗ್ರಾಮೀಣ ಹಾಗೂ ದೂರ ಪ್ರದೇಶದ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗಾಗಿ ಬಹುಉಪಯೋಗಿ ಹರ್ಷೋಲ್ಲಾಸದ ಕಲಿಕಾ ಕೇಂದ್ರಗಳು:

ವಿಜ್ಞಾನ, ಕಲೆ, ಸಂಗೀತ, ಸ್ಥಳೀಯ ಕಲೆಗಳು, ಕ್ರೀಡೆಗಳು, ಆಟಗಳು, ಆಹಾರ, ಪರಂಪರೆ ಮತ್ತು ಜ್ಞಾನದ ವಿಶಾಲವಾದ ಇತರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಜ್ಞಾನವನ್ನು ಅನ್ವೇಷಿಸಲು ವಿಶೇಷ ಅವಶ್ಯಕತೆಗಳುಳ್ಳ ಮಕ್ಕಳಿಗೆ ಹರ್ಷೋಲ್ಲಾಸದ ಕಲಿಕಾ ಕೇಂದ್ರವು ಅನನ್ಯ ಅವಕಾಶಗಳನ್ನು ನೀಡುತ್ತದೆ. ಅಂತಹ ಜ್ಞಾನ ಕೇಂದ್ರವು ಮಕ್ಕಳ ಸ್ನೇಹಿಯಾಗಿ, ಯಾವುದೇ ನಿರ್ಭಂದಗಳಿಲ್ಲದೆ ಸಂತೋಷದಾಯಕ ವಾತಾವರಣ ಹೊಂದಿರಬೇಕು. ಈ ಕಲಿಕಾ ಕೇಂದ್ರವು ಸಾಮಾನ್ಯ ತರಗತಿಯೊಳಗೆ ಗೊತ್ತುಪಡಿಸಿದ ಪ್ರದೇಶವಾಗಿದ್ದು, ತಮ್ಮ ಕಲಿಕೆಯನ್ನು ಅಭ್ಯಾಸ ಮಾಡಲು, ಉತ್ಕೃಷ್ಟಗೊಳಿಸಲು ಹಾಗೂ ಪುನರ್‌ಮನನಗೊಳಿಸಿ ಆಸಕ್ತಿದಾಯಕ ಅನುಭವಗಳನ್ನು ಒದಗಿಸುತ್ತದೆ.

ಈ ರೀತಿಯ ಕಲಿಕಾ ಕೇಂದ್ರವು ವೈವಿಧ್ಯಮಯ ಕಲಾ ಸಾಮಾಗ್ರಿಗಳು, ಆನ್‌ಲೈನ್ ಆಟಗಳು/ ವಿಡಿಯೋಗಳು, ಆಡಿಯೋ ಪುಸ್ತಕಗಳು ಮತ್ತು ಇತರ ಸೂಚನಾ ಸಾಧನಗಳಿಂದ ತುಂಬಿವೆ. ವಿದ್ಯಾರ್ಥಿಗಳು ಆಯಾ ತರಬೇತಿಗಳಲ್ಲಿ ವಾರ ಪೂರ್ತಿ ನಡೆದ ಕಲಿಕೆ ನಂತರ ಶಾಲೆಯಿಂದ ನಿಯೋಜನೆ ಪೂರ್ಣಗೊಳಿಸಿ ಕಲಿಕೆಯನ್ನು ವೃದ್ಧಿಸಲು ಕಲಿಕಾ ಕೇಂದ್ರಗಳಿಗೆ ಭೇಟಿ ನೀಡಿ ವಿವಿಧ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ವಿದ್ಯಾರ್ಥಿಗಳು ಉತ್ತಮವಾಗಿ

ವಿನ್ಯಾಸಗೊಳಿಸಿದ ಕಲಿಕಾ ಕೇಂದ್ರಗಳಲ್ಲಿ ಪಾಲ್ಗೊಳ್ಳುವ ಚಟುವಟಿಕೆಗಳ ಮೂಲಕ ಪಠ್ಯಕ್ರಮದ ವಿಷಯಗಳನ್ನು ವಾಸ್ತವಾಗಿ ಅರ್ಥೈಸಿಕೊಳ್ಳುತ್ತಾರೆ. ಪ್ರಾಯೋಗಿಕವಾಗಿ ಸ್ವತಂತ್ರವಾಗಿ ಹಾಗೂ ಸಣ್ಣ ಗುಂಪುಗಳಲ್ಲಿ ವಿದ್ಯಾರ್ಥಿಗಳಿಗೆ ಅವರಿಗೆ ಬೇಕಾಗಿರುವ ಸಮಯ ಮತ್ತು ಅವಕಾಶಗಳನ್ನು ಒದಗಿಸಿ ಒಂದು "ಪ್ರಾಜೆಕ್ಟ್" ಅನ್ನು ಪೂರ್ಣಗೊಳಿಸಲು ಮತ್ತು ವಿಷಯವನ್ನು ಆಳವಾಗಿ ತಿಳಿದುಕೊಳ್ಳಲು ಈ ಬಹು ಉಪಯೋಗಿ ಕಲಿಕಾ ಕೇಂದ್ರಗಳು ಪೋಷಕರು ಹಾಗೂ ಸ್ಥಳೀಯ ಸಮುದಾಯದ ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸುತ್ತವೆ. ಶಾಲೆಗಳಲ್ಲಿನ ಕಲಿಕಾ ಕೇಂದ್ರಗಳು ಹಾಗೂ ಶಾಲೆಗಳ ಒಕ್ಕೂಟಕ್ಕಾಗಿ ವಿದ್ಯಾಭ್ಯಾಸದ ಪ್ರಕ್ರಿಯೆಯಲ್ಲಿ ಎಲ್ಲಾ ಹಂತಗಳಲ್ಲಿ ಸಕ್ರಿಯವಾಗಿ ಕಲಿಕೆಯನ್ನು ಉತ್ತೇಜಿಸುವ ಪ್ರಯತ್ನವಾಗಿದ್ದು, ವಿದ್ಯಾಭ್ಯಾಸದಲ್ಲಿ ಈ ಕಾರಣಕ್ಕೆ ಕಲಿಕೆ ಕೇಂದ್ರಗಳು ಪ್ರಯೋಜನಕಾರಿಯಾಗಿದೆ. ಬೇರೆ ದೇಶಗಳಲ್ಲಿಯೂ ಸಹ ಇಂತಹ ಬಹು ಉಪಯೋಗಿ ಕಲಿಕಾ ಕೇಂದ್ರಗಳಿವೆ.

ಕಲಿಕಾ ಕೇಂದ್ರಗಳು ತರಗತಿಯ ಸ್ವಯಂವೇದ್ಯ ಬಹುಉಪಯೋಗಿ ವಿಭಾಗವಾಗಿದ್ದು, ವಿದ್ಯಾರ್ಥಿಗಳು ಸ್ವತಂತ್ರವಾಗಿ ಸ್ವ-ಪ್ರೇರಣೆಯಿಂದ ಕಲಿಕೆಯ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗುತ್ತಾರೆ. ಅಂತಹ ಹರ್ಷೋಲ್ಲಾಸದ ಕಲಿಕಾ ಕೇಂದ್ರಗಳನ್ನು ಗ್ರಾಮೀಣ ಗ್ರಂಥಾಲಯಗಳಲ್ಲಿ ಸ್ಥಾಪಿಸಬಹುದು. ವಿದ್ಯಾರ್ಥಿಗಳ ವಯಸ್ಸಿಗನುಗುಣವಾಗಿ ಪುಸ್ತಕಗಳು, ಕಲಿಕಾ ಸಾಧನಗಳು, ಆನ್‌ಲೈನ್ ಕಲಿಕಾ ಕಾರ್ಯಕ್ರಮಗಳು, ಆಟಗಳು ಮತ್ತು ಕ್ರಿಯಾತ್ಮಕ ಕಾರ್ಯಕ್ರಮಗಳಿಗೆ ಕೌಶಲ್ಯಾಭಿವೃದ್ಧಿಗಾಗಿ ಹಾಗೂ ಮುಕ್ತ ಪಠ್ಯಕ್ರಮದ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಲು ಅಗತ್ಯ ಕೌಶಲ್ಯಗಳನ್ನು ಹೊಂದಲು ಹಾಗೂ ಮಕ್ಕಳ ಸಮಗ್ರ ವಿಕಸನಕ್ಕಾಗಿ ಪೂರಕವಾಗಿದೆ.

ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಬಹುಉಪಯೋಗಿ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಕಲಿಕಾ ಕೇಂದ್ರಕ್ಕೆ ಈ ಕೆಳಗಿನ ಸಾಧನಗಳು ಹಾಗೂ ಕಲಿಕಾ ಬೆಂಬಲಿತ ಉಪಕರಣಗಳ ಅವಶ್ಯಕತೆ ಇದೆ.

- 8 GB RAM ಹೊಂದಿರುವ ಕಂಪ್ಯೂಟರ್‌ಗಳು.
- ಅಲೆಕ್ಸಾ ಸಾಧನಗಳು
- SAMSUNG TABLET
- Elementary Equitable inclusive Education Kit.

ಬಹುಉಪಯೋಗಿ ಕಲಿಕಾ ಕೇಂದ್ರಗಳನ್ನು ನಡೆಸಲು ಗ್ರಂಥಪಾಲಕರು ತರಬೇತಿ ಪಡೆಯಲು ಪ್ರೇರೇಪಿಸುತ್ತಾರೆ. ಒಂದು ವೇಳೆ ಗ್ರಂಥ ಪಾಲಕರಿಗೆ ತರಬೇತಿಯನ್ನು ನೀಡಲು ಸಾಧ್ಯವಾಗದಿದ್ದಲ್ಲಿ ಆ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುವ ಸ್ವ-ಸಹಾಯ ಗುಂಪುಗಳ (SHG) ಸದಸ್ಯರಿಗೆ ತರಬೇತಿಯನ್ನು ನೀಡಿ ಗ್ರಾಮ ಪಂಚಾಯಿತಿಗಳಿಂದ ಕಲಿಕಾ ಕೇಂದ್ರಗಳಿಗೆ ನಿಯೋಜಿಸಲಾಗುವುದು. Google ತರಗತಿಗಳು, DEEKSHA, SWAYAM ಇತ್ಯಾದಿ ಆನ್‌ಲೈನ್ ತರಬೇತಿ ಪೋರ್ಟಲ್‌ಗಳನ್ನು ಬಳಸಿಕೊಂಡು 15 ದಿನಗಳ ತರಬೇತಿ ನೀಡಿ ಸಾಮಾರ್ಥ್ಯಾಭಿವೃದ್ಧಿ ಕಾರ್ಯಕ್ರಮ ನೀಡಲಾಗುವುದು.

ಇಂತಹ ಬಹು ಉಪಯೋಗಿ ಕಲಿಕಾ ಕೇಂದ್ರಗಳಿಂದ ವಿದ್ಯಾಭ್ಯಾಸದ ಮೂಲಕ ಹರ್ಷೋಲ್ಲಾಸದಿಂದ ಮಕ್ಕಳ ವಿಕಸನಕ್ಕೆ ಒಂದು ಯಶಸ್ವಿ ತಂತ್ರಗಾರಿಕೆಯಾಗುವುದರಲ್ಲಿ ಯಾವದೇ ಸಂದೇಹ ಇರುವುದಿಲ್ಲ.


COPPERSMITH
CONFECTIONER
TAILOR
ARTISTE
LION
SQUIRREL
RAT
PANTHER
BULLOCK
BULL

